

# ಅಮ್ಮ ಎಂದೂ ಬದಲಾಗಲಿಲ್ಲ..!

**-ಶಿವರಾಜ್‌ಕುಮಾರ್**

ಸದಾಶಿವನಗರದ 'ದೊಡ್ಮನೆ'ಯ ಅಂಗಳದಲ್ಲಿ ಪಾರ್ವತಮ್ಮ ರಾಜ್‌ಕುಮಾರ್ ಅವರ ದೇಹ ತಣ್ಣಗೆ ಮಲಗಿತ್ತು. ಮನೆಯ ಒಳಗೆ ಮತ್ತು ಹೊರಗೆ ಜನಜಂಗುಳಿ. ಸಾವಿರಾರು ಜನ ಮನೆಯ ಕಾಂಪೌಂಡಿನೊಳಕ್ಕೆ ಕ್ಯೂನಲ್ಲಿ ಬಂದು ಮೃತದೇಹ ನೋಡಿ ಕೈಮುಗಿದು ಹೋಗುತ್ತಿದ್ದರು. ಅಂಗಳದ ಇನ್ನೊಂದು ಮೂಲೆಯಲ್ಲಿ ಶಿವರಾಜ್‌ಕುಮಾರ್ ವಿಷಣ್ಣತೆ-ಯಿಂದ ಕುಳಿತಿದ್ದರು. ನಡುನಡುವೆ ಗಣ್ಯರು, ಚಿತ್ರರಂಗದ ಪ್ರಮುಖರು ಬಂದು ಮೃತದೇಹವನ್ನು ನೋಡಿದ ಬಳಿಕ ಶಿವರಾಜ್‌ಕುಮಾರ್‌ರನ್ನು ಹುಡುಕಿಕೊಂಡು ಬರುತ್ತಿದ್ದರು. 'ಐ ಆ್ಯಮ್ ಸಾರಿ, ತುಂಬ ದುಃಖವಾ-ಯಿತು, ಷಿ ಈಸ್ ಗ್ರೇಟ್, ಧೈರ್ಯ ತೆಗೆದುಕೊಳ್ಳಿ... ' ಸಾಂತ್ವನದ ಮಾತುಗಳು. ಶಿವಣ್ಣ ಎಲ್ಲರಿಗೂ ಕೈಮುಗಿದು, ಕೆಲವರನ್ನು ತಬ್ಬಿಕೊಂಡು ಪದೇ ಪದೇ ಹನಿಗಣ್ಣಾಗುತ್ತಿದ್ದರು. ಈ ಎಲ್ಲದರ ನಡುವೆಯೇ ಅವರಿಗೆ ಹಗುರಾಗಬೇಕು ಅನ್ನಿಸಿತೋ.. ಏನೋ... ಅಮ್ಮನನ್ನು ನೆನಪಿಸಿಕೊಳ್ಳುತ್ತಾ ಮಾತನಾಡತೊಡಗಿದರು. (ನಡುನಡುವೆ ನಮ್ಮ ಪ್ರಶ್ನೆಗಳಿದ್ದವು.)

'ಡಾಕ್ಟರ್ ತುಂಬ ಪ್ರಯತ್ನಿಸಿದರು. ಕಳೆದ ಕೆಲವು ದಿನಗಳಿಂದ ನಾವೆಲ್ಲ ಆತಂಕದಲ್ಲೇ ಇದ್ದೆವು. ನಡುವೆ ಒಂದೆರಡು ಸಲ ವೆಂಟಿಲೇಟರ್ ನೆರವಿಲ್ಲದೆ ಉಸಿರಾಡಿದರು. ಡಾಕ್ಟರ್‌ಗಳಿಗೂ ಆಗ ಸ್ವಲ್ಪ ಧೈರ್ಯ ಬಂತು. ಆದರೆ ಕ್ಯಾನ್ಸರ್ ಪ್ರಭಾವ ಇತ್ತು ನೋಡಿ, ಅದು ಒಳಗಿನಿಂದಲೇ ಕಿಡ್ನಿಗೂ ಹರಡಿತ್ತು. ಕೊನೆಯ ಎರಡು ವಾರ ಸಾಕಷ್ಟು ಹೋರಾಟ ನಡೆಸಿದರು...

'ಅಪ್ಪಾಜಿ ಮತ್ತು ಅಮ್ಮನದ್ದು ನಿಜಕ್ಕೂ ಅನುರೂಪದ ಜೋಡಿ. ಇಬ್ಬರ ಕುಟುಂಬವೂ ಮೊದಲಿನಿಂದ ಇಂಟರ್ ರಿಲೇಟೆಡ್. ಅಮ್ಮನ ಮೇಲೆ ಅಪ್ಪಾಜಿಯದ್ದು ಅಗಾಧ ಪ್ರೀತಿ, ಅಮ್ಮನಿಗೆ ಅಪ್ಪಾಜಿ ಸರ್ವಸ್ವವೂ ಆಗಿದ್ದರು. ಅಪ್ಪಾಜಿಯ ಎಲ್ಲ ಬೇಕು ಬೇಡಗಳನ್ನೂ ಅಮ್ಮ ನೋಡಿಕೊಳ್ಳುತ್ತಿದ್ದರು. ಆ ಪ್ರೀತಿ, ಬಾಂಧವ್ಯ ನಮ್ಮ ಎಲ್ಲರ ಮೇಲೂ ಪ್ರಭಾವ ಬೀರಿದೆ. ಮದ್ರಾಸ್‌ನಲ್ಲಿ ನಮ್ಮದು ತುಂಬಿದ ಮನೆ. ಬರುವ ಎಲ್ಲರಿಗೂ ಊಟ– ತಿಂಡಿ ಆಗಬೇಕು. ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 11 ಗಂಟೆಯವರೆಗೂ ಉರಿಯೋದು. ಪ್ರತಿದಿನ 300–400 ಜನ ಊಟ ಮಾಡುತ್ತಿದ್ದರು. ಅಮ್ಮ ಯಾವತ್ತಾ-ದರೂ ಅದನ್ನು ಬೇಡ ಅನ್ನಲಿಲ್ಲ. ಅವರು ಬೇಡ ಅಂದಿದ್ದರೆ ಅದು ಅಲ್ಲಿಗೇ ನಿಂತಿರೋದು. ರಾಜ್‌ಕುಮಾರ್ ಒಂದು ದೊಡ್ಡ ಆಲದ ಮರದಂತೆ ಬೆಳೆಯಲು ಅಮ್ಮ ನೀರಿನಂತೆ ಹರಿದರು. ಆ ನೀರಿನ ಪಸೆಯಲ್ಲೇ ನಾವೂ ಒಂದಿಷ್ಟು ಸಣ್ಣ ಬೇರುಗಳು ಚೆನ್ನಾಗಿ ಬೆಳೆದೆವು. ಎಲ್ಲದಕ್ಕೂ ಕಾರಣ ಅಮ್ಮ..

'ಮದ್ರಾಸಿನ ಮನೆಯಲ್ಲಿ ನಾವು 25–30 ಮಕ್ಕಳಿದ್ದೆವು. ಎಲ್ಲರನ್ನೂ ಸಮನಾಗಿ ಕಂಡು ಬೆಳೆಸಿದವರು ಅವರು. ಮದುವೆಯಾಗಿ ಒಂಭತ್ತು ವರ್ಷದ ಬಳಿಕ ಹುಟ್ಟಿದವನು ನಾನು. ಇನ್ನೇನು ಮಗು ಆಗುತ್ತೋ ಇಲ್ಲವೋ ಎಂದು ಸಂಶಯ ಪಡುತ್ತಿದ್ದಾಗ ಈ ಸಣಕಲ ಹುಟ್ಟಿದ ಎಂದು ಅಮ್ಮನೇ ಒಮ್ಮೊಮ್ಮೆ ತಮಾಷೆ ಮಾಡೋರು. ಎಲ್ಲರನ್ನೂ ಒಂದೇ ಪ್ರೀತಿಯಿಂದ ಬೆಳೆಸಿದರು. ನಾನು ಹೊಸಮನೆ ಕಟ್ಟಿಸಿಕೊಂಡು ಬೇರೆ ಹೋದರೂ ನಮ್ಮ ಕುಟುಂಬದ ನಡುವಣ ಪ್ರೀತಿ, ಬಾಂಧವ್ಯ ಎಳ್ಳಷ್ಟೂ ಕಡಿಮೆ ಆಗಿರಲಿಲ್ಲ. ಕುಟುಂಬದಲ್ಲಿ ಸಣ್ಣ ಪುಟ್ಟ ಮಾತುಗಳು, ತಪ್ಪು ತಿಳುವಳಿಕೆಗಳು ಬಂದರೂ ಮನೆಯೊಳಗೇ ಇತ್ಯರ್ಥ ಮಾಡಿಕೊಳ್ಳುತ್ತಿದ್ದೆವು. ಅಮ್ಮನ ನಿರ್ವಾಜ್ಯ ಪ್ರೀತಿಯೇ ಅದಕ್ಕೆ ಕಾರಣ. ಅಪ್ಪಾಜಿ ನಮಗೆ ನೀಡಿದ ಶಕ್ತಿಯೂ ಹೌದು.'

'ಅಮ್ಮ ಬಡತನವನ್ನೂ ನೋಡಿದ್ದಾರೆ, ಅಗಾಧ ಶ್ರೀಮಂತಿಕೆಯನ್ನೂ ನೋಡಿದ್ದಾರೆ. ಆದರೆ ಎರಡೂ ಸಂದರ್ಭಗಳಲ್ಲಿ ಅವರು ಬದಲಾಗಲಿಲ್ಲ. ಸರಳವಾಗಿಯೇ ಬದುಕಿದರು. ಅದೇ ಸರಳತೆ ಎಲ್ಲ ಮಕ್ಕಳಿಗೂ ಬಂತು. ಬದುಕಿನಲ್ಲಿ ಯಾವುದನ್ನೂ ನಿರೀಕ್ಷಿಸಿ ಅವರು ಮಾಡಿದರು ಅನ್ನಿಸುತ್ತಿಲ್ಲ. ಬದುಕಿನಲ್ಲಿ ಬಂದದ್ದನ್ನು ಬಂದಂತೆ ಸ್ವೀಕರಿಸಿದರು. ಆಯಾ ಸಂದರ್ಭದಲ್ಲಿ ಯಾವ ಧೈರ್ಯವನ್ನು ತೋರಬೇಕಿತ್ತೋ ಅದನ್ನು ತೋರಿಸಿದರು. ಸಾಧಿಸಬೇಕು ಎಂದು ಅನ್ನಿಸಿದ್ದನ್ನು ಸಾಧಿಸಿ ತೋರಿಸಿದರು...'

'ಅಮ್ಮ ಯಶಸ್ವಿ ಬಿಸಿನೆಸ್‌ಮನ್ ಅನ್ನುತ್ತಾರೆ ಎಲ್ಲರೂ. 83 ಸಿನಿಮಾ-ಗಳನ್ನು ನಿರ್ಮಿಸಿ ಅವುಗಳಲ್ಲಿ ಶೇಕಡಾ 85ರಷ್ಟು ಯಶಸ್ಸು ಸಾಧಿಸಿದ್ದು ಸಣ್ಣ ಸಾಧನೆಯೇನಲ್ಲ. ಭಾರತದ ಚಿತ್ರರಂಗದಲ್ಲೇ ಇದೊಂದು ದೊಡ್ಡ ಸಾಧನೆ. ಈ ಸಂದರ್ಭದಲ್ಲಿ ಹಲವು ಸಲ ಹಲವು ರೀತಿಯ ಸವಾಲುಗಳನ್ನು ಉದ್ಯಮದ ಒಳಗೂ ಎದುರಿಸಬೇಕಾಯಿತು. ಅವೆಲ್ಲವನ್ನೂ ಅವರು ಧೈರ್ಯದಿಂದಲೇ ಎದುರಿಸಿದರು. ಪಂಡರಿಬಾಯಿಯವರ – ಕೆರಳಿದ ಸಿಂಹ – ಸಿನಿಮಾ ಬಿಡುಗಡೆಯ ಸಂದರ್ಭದಲ್ಲಿ, ಕೆಲವರು ಅಡ್ಡಿ ಮಾಡಿದಾಗ, ಮದ್ರಾಸಿನಲ್ಲಿ ಚಿತ್ರದ 25ಕ್ಕೂ ಹೆಚ್ಚು ಪ್ರಿಂಟ್‌ಗಳನ್ನು ಹಾಕಿಸಿ ಅಲ್ಲಿಂದ ಕಾರಿನಲ್ಲಿ ಇಲ್ಲಿಗೆ ತಂದು ಬಿಡುಗಡೆ ಮಾಡಿಸಿದರು. ಆಕೆ ತುಂಬ ಸ್ಟ್ರಾಂಗ್ ಲೇಡಿ. ಅಪ್ಪಾಜಿ ಯ ಅಪಹರಣದ ಸಂದರ್ಭದಲ್ಲೂ ಪರಿಸ್ಥಿತಿಯನ್ನು ಧೈರ್ಯದಿಂದ ಎದುರಿಸಲು ನಮಗೆ ಒತ್ತಾಸೆಯಾಗಿ ನಿಂತರು...'

'ಜೀವನದ ಎಲ್ಲ ಮಗ್ಗುಲುಗಳನ್ನೂ ಅವರು ನೋಡಿದ್ದಾರೆ. ಕೆಳಮಟ್ಟ-ದಿಂದ ಹೈಲೆವೆಲ್‌ವರೆಗೂ– ಸರಳವಾಗಿಯೇ ಬದುಕಿದರು.– ಮಕ್ಕಳನ್ನು ಲ್ಯಾವಿಶ್ ಆಗಿ ಬೆಳೆಸಿದರು. ಆದರೆ ನಮಗೂ ಅದೇ ಸರಳತೆ ಬಂತು...'

'ಗಂಡ– ಹೆಂಡತಿ ನಡುವಣ ಪ್ರೀತಿ ಮತ್ತು ಬಾಂಧವ್ಯದ ಕುರಿತು ಅವರದ್ದು ಹೊರಜಗತ್ತಿಗೆ ಒಂದು ಆದರ್ಶ. 50 ವರ್ಷದ ದಾಂಪತ್ಯ ಜೀವನ. ಎಷ್ಟೊಂದು ಹೀರೋಯಿನ್‌ಗಳನ್ನು ಅಮ್ಮ ಸಿನಿಮಾ ಜಗತ್ತಿಗೆ ಕಾಣಿಕೆಯಾಗಿ ಕೊಟ್ಟರು ನೋಡಿ. ಮಂಜುಳಾ, ಜಯಮಾಲ, ರಮ್ಯ, ಸುಧಾರಾಣಿ, ಆಶಾರಾಣಿ, ರಕ್ಷಿತಾ, ಮಾಲಾಶ್ರೀ..! ನಾಯಕಿಯರನ್ನು ಅವರು ಏನನ್ನು ನೋಡಿ ಆಯ್ಕೆ ಮಾಡ್ತಿದ್ದರೋ ಗೊತ್ತಿಲ್ಲ; ಆದರೆ ಅವರ ಆಯ್ಕೆ ಸದಾ ಯಶಸ್ವಿಯಾಯಿತು. ಅಪ್ಪಾಜಿಯ ಕಾಲದ ಹೀರೋಯಿನ್-ಗಳು ಮಾತ್ರವಲ್ಲ, ನಮ್ಮ ಕಾಲದಲ್ಲೂ ಅವರದ್ದು ಕಾಲಕ್ಕೆ ತಕ್ಕಂತಹ ಆಯ್ಕೆ. ಅಪ್ಪಾಜಿ, ಅಮ್ಮ ಮತ್ತು ವರದಪ್ಪ ಸೇರಿ ಕಥೆ ಆಯ್ಕೆ ಮಾಡುತ್ತಿದ್ದರು. ಅಮ್ಮ ಹೀರೋಯಿನ್‌ಗಳನ್ನು ಆಯ್ಕೆ ಮಾಡುತ್ತಿದ್ದರು. ಅಲ್ಲಿಗೆ ಮುಗೀತು, ನಾವು ಯಾವ ಪ್ರಶ್ನೆಗಳನ್ನೂ ಕೇಳುತ್ತಿರಲಿಲ್ಲ... ನಮ್ಮನೇಲಿ ಹೆಣ್ಮಕ್ಕಳೇ ಸ್ಟ್ರಾಂಗು..'

''ನನ್ನ ಸಿನಿಮಾಗಳಲ್ಲಿ ನನ್ನ ಜತೆಗೆ ನಟಿಸಿದ ಹೀರೋಯಿನ್‌ಗಳ ನಟನೆ ಬಗ್ಗೆ ನಾನು ನನ್ನ ಹೆಂಡತಿಯ ಜತೆ ಚರ್ಚಿಸುವುದುಂಟು. ಆದರೆ ಅಪ್ಪ ಅಮ್ಮನ ನಡುವೆ ಅಂತಹ ಚರ್ಚೆ ಆದದ್ದೂ ನನಗೆ ಗೊತ್ತಿಲ್ಲ. ಒಮ್ಮೆ ಅಮ್ಮನ ಜತೆ ಈ ಬಗ್ಗೆ ಕೇಳಿದಾಗ, 'ಅಯ್ಯೋ ಹಾಗೆ ಹೀರೋಯಿನ್‌ಗಳ ವಿಷಯದಲ್ಲಿ ನಿನ್ನ ಅಪ್ಪಾಜಿ ಜತೆ ಜಗಳ ಮಾಡುವುದಿದ್ದರೆ ಎಷ್ಟು ಸಲ ಜಗಳ ಮಾಡಬೇಕಿತ್ತೋ..' ಎಂದು ನಕ್ಕುಬಿಟ್ಟರು...''

'ಮೂರು ತಲೆಮಾರುಗಳಲ್ಲೂ ಸಿನಿಮಾ ನಿರ್ಮಿಸಿ, ವಿತರಿಸಿ, ಹಂಚಿಕೆ ಮಾಡಿ ಯಶಸ್ವಿ ಆಗುವುದೆಂದರೆ.. ಇಟ್ ಇಸ್ ಗ್ರೇಟ್. ರಾಜ್‌ಕುಮಾರ್ ಒಂದು ಕಲ್ಟ್ ಆಗಿ, ಇಂಡಸ್ಟ್ರಿಯೇ ಆಗಿ ಬೆಳೆಯುವುದಕ್ಕೆ ಅಮ್ಮನೇ ಕಾರಣ.'

* ಕೋಪಾನಾ...? .. ಕೆಲವೊಮ್ಮೆ ಸಿಕ್ಕಾಪಟ್ಟೆ ಕೋಪ ಮಾಡಿಕೊಳ್ಳೋರು. ಆದ್ರೆ ಸ್ವಲ್ಪ ಹೊತ್ತು. ಆಮೇಲೆ ಅವರಿಗೆ ಅದು ಮನಸ್ಸಿನಲ್ಲಿ ಇರುತ್ತಿರಲಿಲ್ಲ..'

'ತುಂಬ ನೆನಪಾಗೋದು ಅವರು ಮಾಡುತ್ತಿದ್ದ ಮಟನ್ ಸಾರು ಮತ್ತು ತಲೆಮಾಂಸದ ಸಾರು. ದೊಡ್ಡ ಹಂಡೇಲಿ ಬೇಯಿಸೋರು. ಇನ್ನೊಂದು ನಮ್ಮ ಮಕ್ಕಳ ತಲೆಗೆ ಅವರೇ ಕುಳಿತು ಹರಳೆಣ್ಣೆ ಮಸಾಜ್ ಮಾಡೋರು. ನಾವೆಲ್ಲ ಅದನ್ನು ತಪ್ಪಿಸಿಕೊಂಡು ಓಡೋದು. ಬಿಡ್ತಿರಲಿಲ್ಲ. ಚೆನ್ನಾಗಿ ಎಣ್ಣೆ ತೀಡೋರು. ಊಟದ ವಿಷಯದಲ್ಲಿ ಯಂತೂ ಅಮ್ಮ ತುಂಬ ಧಾರಾಳಿ... ಎಷ್ಟೊಂದು ಜನರಿಗೆ ಅನ್ನಪೂರ್ಣೇಶ್ವರಿ..!'